# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:13/07/2016

ಪ್ರಕರಣ ಸಂಖ್ಯೆ: ಆರ್‌ಎ. 19/2012-13

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀ ಸಿ.ಮುನಿಯಪ್ಪ<br>ಬಿನ್ ಗಂಗಪ್ಪ<br>2. ಮುನಿಯಮ್ಮ ಪವತಿ ಇವರ ವಾರಸುದಾರರು<br>2.ಅ) ಸೀತಮ್ಮ ಬಿನ್ ಲೇಟ್ ಮುನಿಸ್ವಾಮಿ<br>3. ಯರ್ರಪ್ಪ ಬಿನ್ ಮುನಿಸ್ವಾಮಿ<br>-ಎಲ್ಲರೂ ವಾಸ ಅತ್ತಿಗಿರಿ ಗ್ರಾಮ<br>ಕಸಬಾ ಹೋಬಳಿ<br>ಬಂಗಾರಪೇಟೆ ತಾಲ್ಲೂಕು.<br>( ಶ್ರೀ ಚಂದ್ರಪ್ಪ<br>-ವಕೀಲರು ರವರಿಂದ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ.<br>2. ಬಂಗಾರಪೇಟೆ ತಾಲ್ಲೂಕು<br>ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿ<br>ಕಾರ್ಯದರ್ಶಿ<br>ತಹಶೀಲ್ದಾರ್ ಬಂಗಾರಪೇಟೆ ತಾಲ್ಲೂಕು<br>3. ಬಾಟಾ ಮುನಿಸ್ವಾಮಿ(ಪವತಿ) ಇವರ ವಾರಸುದಾರರು<br>3ಅ) ದೊಡ್ಡಚಿನ್ನಮ್ಮ ಬಿನ್ ಲೇಃ ಬಾಟಾಮುನಿಸ್ವಾಮಿ<br>ಕೋಂ ಯಲ್ಲಜೋಗಿ ಮುನಿಯಪ್ಪ<br>ವರದಾಪುರ-ಮಾವಹಳ್ಳಿ<br>ಬಂಗಾರಪೇಟೆ ತಾಲ್ಲೂಕು<br>3ಆ) ಚಿಕ್ಕಚಿನ್ನಮ್ಮ ಬಿನ್ ಲೇಃ ಬಾಟಾಮುನಿಸ್ವಾಮಿ<br>ಕೋಂ ವೆಂಕಟರಾಮ್<br>ಕೋಡಿರಾಮಸಂದ್ರಪುರ ಗ್ರಾಮ<br>ಐಮಕ ಅಂಚೆ,ಕೋಲಾರ ತಾಲ್ಲೂಕು<br>3ಇ) ವೆಂಕಟಮ್ಮ ಬಿನ್ ಲೇಟ್ ಬಾಟಾಮುನಿಸ್ವಾಮಿ<br>ಕೋಂ ಗುಲ್ಲಪ್ಪ ,ಮಾದಮಂಗಲ ಗ್ರಾಮ<br>ಸೂಲಿಕುಂಟೆ ಅಂಚೆ, ಬಂಗಾರಪೇಟೆ ತಾಲ್ಲೂಕು<br>4. ವೆಂಕಟಪ್ಪ ಬಿನ್ ಲೇಟ್ ಬಾಟಾಮುನಿಸ್ವಾಮಿ<br>ಅತ್ತಿಗಿರಿ ಗ್ರಾಮ,ಕಸಬಾ ಹೋಬಳಿ<br>ಬಂಗಾರಪೇಟೆ ತಾಲ್ಲೂಕು<br>( ಶ್ರೀ ಟಿ.ಎಂ.ಶಿವಣ್ಣ<br>-ವಕೀಲರು ರವರಿಂದ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ ರವರ ಪ್ರಕರಣ ಸಂಖ್ಯೆ: ಕ್ರಮಾಂಕ:ಎಲ್.ಎನ್.ಡಿ/ಆರ್.ಯು.ಓ(ಎ)36/2004-05 ದಿನಾಂಕ:27-09-2012 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 50 ರಂತೆ ಸಲ್ಲಿಸಿರುತ್ತಾರೆ.

...2

ಪ್ರಕರಣದ ಸಂಕ್ಷಿಪ್ತ ವಿವರ,

ಬಂಗಾರಪೇಟೆ ತಾಲ್ಲೂಕು, ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿಯು ದಿನಾಂಕ:21-02-2004 ರಂದು ನಡೆದ ಸಭೆಯಲ್ಲಿ ಕಸಬಾ ಹೋಬಳಿ ಅತ್ತಿಗೆರೆ ಗ್ರಾಮದ ಸ.ನಂ. 41 ರಲ್ಲಿ ಬಾಟಾ ಮುನಿಸ್ವಾಮಿ ಬಿನ್ ವೆಂಕಟಪ್ಪ ಹಾಗೂ ವೆಂಕಟಪ್ಪ ಬಿನ್ ಬಾಟಾಮುನಿಸ್ವಾಮಿ ಇವರುಗಳಿಗೆ ಅನುಕ್ರಮವಾಗಿ 0-08 ಗುಂಟೆ ಮತ್ತು 3-28 ಗುಂಟೆ ಜಮೀನುಗಳ ಬಗರ್ ಹುಕ್ಕುಂ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲು ನಿರ್ಣಯ ತೆಗೆದುಕೊಂಡಿರುತ್ತೆ. ತಹಶೀಲ್ದಾರ್, ಬಂಗಾರಪೇಟೆ ತಾಲ್ಲೂಕು ರವರು ಕ್ರಮಾಂಕ:ಎಲ್.ಎನ್.ಡಿ/ಆರ್.ಯು.ಓ/2009/91-92 ದಿನಾಂಕ:18-11-2004 ರಂದು ವೆಂಕಟಪ್ಪ ಬಿನ್ ಬಾಟಾಮುನಿಸ್ವಾಮಿ ರವರಿಗೆ 3-20 ಗುಂಟೆ ವಿಸ್ತೀರ್ಣಕ್ಕೆ ಸಾಗುವಳಿ ಚೀಟಿ ನೀಡಿರುತ್ತಾರೆ. ಸಕ್ರಮೀಕರಣ ಸಮಿತಿ ನಿರ್ಣಯ ಹಾಗೂ ಆದೇಶದ ಕ್ರಮಬದ್ದತೆಯನ್ನು ಪ್ರಶ್ನಿಸಿ ಮೇಲ್ಮನವಿದಾರರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಿದ ಮೇರೆಗೆ ವಿಚಾರಣೆ ನಡೆದು ಪ್ರಕರಣ ಸಂಖ್ಯೆ:ಎಲ್.ಎನ್.ಡಿ/ಆರ್.ಯು.ಓ(ಎ)36/2004-05 ರಲ್ಲಿ ದಿನಾಂಕ:27-09-2012 ರಂದು ವಜಾಕರಿಸಲ್ಪಟ್ಟಿರುತ್ತೆ. ಈ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿದಾರರು ಪ್ರಸ್ತುತ ಮೇಲ್ಮನವಿ ಅರ್ಜಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸುಗಳನ್ನು ನೀಡಲಾಯ್ತು.

ದಿನಾಂಕ:05-03-2014 ರಂದು ಪ್ರಕರಣವನ್ನು ವಿಚಾರಣೆಗಾಗಿ ತೆಗೆದುಕೊಂಡಾಗ ಉಭಯತ್ರರು ಹಾಜರು. ದಿನಾಂಕ:12-03-2014 ರ ಒಳಗೆ ಲಿಖಿತ ವಾದ ಮಂಡಿಸುವಂತೆ ತಿಳಿಸಿ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು ಹಿಂದಿನ ಪೀಠಾಧಿಕಾರಿಗಳು ಆದೇಶ ಹೊರಡಿಸದ ಕಾರಣ ಪ್ರಕರಣವನ್ನು ಪುನಃ ವಿಚಾರಣೆಗಾಗಿ ತೆಗೆದುಕೊಳ್ಳಲಾಯ್ತು. ದಿನಾಂಕ:25-03-2015. ರಂದು ಉಭಯತ್ರರೂ ಹಾಜರು, ಉಭಯತ್ರರ ಕೋರಿಕೆಯ ಮೇರೆಗೆ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು.

ಮೇಲ್ಮನವಿದಾರರು ಮಂಡಿಸಿದ ವಾದದಲ್ಲಿ ಬಂಗಾರಪೇಟೆ ತಾಲ್ಲೂಕು, ಕಸಬಾ ಹೋಬಳಿ, ಅತ್ತಿಗೆರೆ ಗ್ರಾಮದ ಸ.ನಂ. 41 ರಲ್ಲಿ 3-28 ಗುಂಟೆ ಜಮೀನನ್ನು 1ನೇ ಮೇಲ್ಮನವಿದಾರರು ಹಾಗೂ 2 ಮತ್ತು 3ನೇ ಎದುರುದಾರರ ತಂದೆ ಕಳೆದ 40 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದು, ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣಕ್ಕಾಗಿ ನಮೂನೆ-50 ನ್ನು ಸಲ್ಲಿಸಿದುದಾಗಿ ತಿಳಿಸಿರುತ್ತಾರೆ. ಹೀಗಿರುವಲ್ಲಿ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ವಿವಾದಿತ ಜಮೀನನ್ನು 3 ಮತ್ತು 4ನೇ ಎದುರುದಾರರಿಗೆ ಕಾನೂನುಬಾಹಿರವಾಗಿ ಮಂಜೂರು ಮಾಡಿತೆಂದು ನಿವೇದಿಸಿರುತ್ತಾರೆ. ದಿನಾಂಕ:16/11/1993 ರ ಆದೇಶವನ್ನು ಪ್ರಶ್ನಿಸಿ 1 ಮತ್ತು 3ನೇ ಮೇಲ್ಮನವಿದಾರರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಪ್ರಶ್ನಿಸಲಾಗಿ ಅದು ವಿಚಾರಣೆ ನಂತರ ಪ್ರಕರಣ ಸಂಖ್ಯೆ: ಎಲ್.ಎನ್.ಡಿ/ಆರ್.ಯು.ಓ(ಬಿ.ಪೇಟೆ)1/94-95 ರಲ್ಲಿ ದಿನಾಂಕ:17-7-1997 ರಂದು ವಜಾ ಆಯಿತೆಂದು ತಿಳಿಸಿರುತ್ತಾರೆ. ಆದರೆ ಭೂ ಸಕ್ರಮೀಕರಣ ಸಮಿತಿಯು, ಜಿಲ್ಲಾಧಿಕಾರಿಗಳ ಆದೇಶದಲ್ಲಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಪುನಃ ಜಮೀನನ್ನು 3 ಮತ್ತು 4ನೇ ಎದುರುದಾರರಿಗೆ ಸಕ್ರಮೀಕರಣಗೊಳಿಸಿರುವುದಾಗಿ ನಿವೇದಿಸಿರುತ್ತಾರೆ. ಸ್ಥಳ ತನಿಖೆಯನ್ನು ಸಹಾಯಕ ಕಮೀಷನರ್ ಹಾಗೂ ತಹಶೀಲ್ದಾರ್ ರವರು ಮಾಡಿದಾಗ ಮೇಲ್ಮನವಿದಾರರು ವಿವಾದಿತ ಜಮೀನನ್ನು ಸಾಗುವಳಿ ಮಾಡುತ್ತಿದ್ದುದನ್ನು ಗಮನಿಸಿರುತ್ತಾರೆಂದು ವಿವರಿಸಿರುತ್ತಾರೆ. ವಿವಾದಿತ ಜಮೀನನ್ನು ತಾವುಗಳು ಕಳೆದ 50 ವರ್ಷಗಳಿಂದ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿರುವುದರಿಂದ ಎದುರುದಾರರಿಗೆ ಆಗಿರುವ ಭೂ ಸಕ್ರಮೀಕರಣವನ್ನು ರದ್ದುಗೊಳಿಸುವ ಮೂಲಕ ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

4ನೇ ಎದುರುದಾರರ ಪರವಾಗಿ ಸಲ್ಲಿಸಲಾದ ವಾದದಲ್ಲಿ ಮೇಲ್ಮನವಿ ಅರ್ಜಿಯಲ್ಲಿನ ಅಂಶಗಳನ್ನು ಅಲ್ಲಗಳೆಯುತ್ತಾ ಅತ್ತಿಗೆರೆ ಗ್ರಾಮದ ಸ.ನಂ. 41 ರಲ್ಲಿನ 44-10 ಗುಂಟೆ ಜಮೀನು ಸರ್ಕಾರಿ ಗೋಮಾಳವಾಗಿದ್ದು, ಇದರಲ್ಲಿ ಹಲವಾರು ಗ್ರಾಮಸ್ಥರು ಬಗರ್ ಹುಕ್ಕುಂ ಸಾಗುವಳಿ ಮಾಡಿಕೊಂಡು ಬರುತ್ತಿದ್ದು, ಅದರಲ್ಲಿ 3 ಮತ್ತು 4ನೇ

...3